# ವಾರ್ತಾ ಪತ್ರಿಕೆ

RURAL ORIENTED & FARMER FRIENDLY

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ
ನಂದಿನಗರ, ಅಂಚೆ ಪೆಟ್ಟಿಗೆ ಸಂ. 06, ಬೀದರ – 585 226

ಸಂಪುಟ-XXI, ಸಂಚಿಕೆ-II ಜುಲೈ – ಡಿಸೆಂಬರ್, 2025

## ಕುಲಪತಿಗಳ ಮುನ್ನುಡಿ



ಜುಲೈದಿಂದ ಡಿಸೆಂಬರ್, 2025ರವರೆಗಿನ ಅವಧಿಯಲ್ಲಿ ವಿಶ್ವವಿದ್ಯಾಲಯವು ಶಿಕ್ಷಣ, ಸಂಶೋಧನೆ ಹಾಗೂ ವಿಸ್ತರಣಾ ಚಟುವಟಿಕೆಗಳ ಕ್ಷೇತ್ರಗಳಲ್ಲಿ ಸಾಧಿಸಿದ ಪ್ರಮುಖ ಬೆಳವಣಿಗೆಗಳನ್ನು ಒಳಗೊಂಡ ಈ ವಾರ್ತಾ ಪತ್ರಿಕೆಯನ್ನು ನಿಮ್ಮ ಮುಂದಿಡುತ್ತಿರುವುದು ನನಗೆ ಅಪಾರ ಸಂತೋಷವನ್ನುಂಟು ಮಾಡುತ್ತಿದೆ. ಈ ಅವಧಿಯಲ್ಲಿ ವಿಶ್ವವಿದ್ಯಾಲಯದ ವಿವಿಧ ಅಂಗಸಂಸ್ಥೆಗಳು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಅನೇಕ ಮಹತ್ವದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಿವೆ. ಅವುಗಳಲ್ಲಿ ಎಪಾಕಾನ್–2025 (APACON–2025) ಹಾಗೂ ರಾಷ್ಟ್ರೀಯ ಯುವ ವೃತ್ತಿಪರರ ಅಭಿವೃದ್ಧಿ ಕಾರ್ಯಕ್ರಮ ವಿಶೇಷವಾಗಿ ಗಮನಾರ್ಹವಾಗಿವೆ. ಇದರೊಂದಿಗೆ ವಿಶ್ವ ರೇಬೀಸ್ ದಿನ, ರಾಷ್ಟ್ರೀಯ ಹಾಲು ದಿನ ಹಾಗೂ ರಾಷ್ಟ್ರೀಯ ಮೀನುಗಾರರ ದಿನ ಸೇರಿದಂತೆ ಹಲವಾರು ಜಾಗೃತಿ ಹಾಗೂ ವಿಸ್ತರಣಾ ಕಾರ್ಯಕ್ರಮಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಯಶಸ್ವಿಯಾಗಿ ಆಯೋಜಿಸಲಾಗಿದೆ.

ಈ ಅವಧಿಯಲ್ಲಿ ವಿಶ್ವವಿದ್ಯಾಲಯದ ಅಧ್ಯಾಪಕರು, ವಿಜ್ಞಾನಿಗಳು ಹಾಗೂ ವಿದ್ಯಾರ್ಥಿಗಳು ವಿವಿಧ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಪ್ರಶಸ್ತಿ ಹಾಗೂ ಗೌರವಗಳಿಗೆ ಭಾಜನರಾಗಿರುವುದು ವಿಶ್ವವಿದ್ಯಾಲಯಕ್ಕೆ ಹೆಮ್ಮೆಯ ವಿಷಯವಾಗಿದೆ. ಜೊತೆಗೆ ವಿವಿಧ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ನಾಲ್ಕು ಮಹತ್ವದ ಪರಸ್ಪರ ಸಹಕಾರ ಒಪ್ಪಂದಗಳನ್ನು (MoU) ಮಾಡಿಕೊಂಡು ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಚಟುವಟಿಕೆಗಳನ್ನು ಇನ್ನಷ್ಟು ಬಲಪಡಿಸಲಾಗಿದೆ.

ಈ ಸುದ್ದಿಪತ್ರಿಕೆಯ ಪ್ರಕಟಣೆಗೆ ಶ್ರಮವಹಿಸಿರುವ ವಿಸ್ತರಣಾ ನಿರ್ದೇಶಕರು ಹಾಗೂ ಅವರ ಸಂಪೂರ್ಣ ತಂಡವನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ವಿಶ್ವವಿದ್ಯಾಲಯದ ಸಾಧನೆಗಳನ್ನು ತಮ್ಮೆಲ್ಲರಿಗೆ ತಲುಪಿಸುವಲ್ಲಿ ಅವರ ಕೊಡುಗೆ ಶ್ಲಾಘನೀಯವಾಗಿದೆ.

ಸಹಿ
**(ಕೆ.ಸಿ. ವೀರಣ್ಣ)**
ಕುಲಪತಿಗಳು

## ಸಂಪಾದಕೀಯ ನುಡಿ

ಜುಲೈ–ಡಿಸೆಂಬರ್ 2025ರ ಅವಧಿಯನ್ನು ಒಳಗೊಂಡ ಸಂಪುಟ XXI, ಸಂಚಿಕೆ II ರ ವಿಶ್ವವಿದ್ಯಾಲಯದ ವಾರ್ತಾ ಪತ್ರಿಕೆಯನ್ನು ನಿಮ್ಮ ಮುಂದಿಡುತ್ತಿರುವುದು ನನಗೆ ಅತ್ಯಂತ ಸಂತೋಷ ಹಾಗೂ ಹೆಮ್ಮೆಯ ಸಂಗತಿಯಾಗಿದೆ. ಕಳೆದ ಆರು ತಿಂಗಳ ಅವಧಿಯಲ್ಲಿ ವಿಶ್ವವಿದ್ಯಾಲಯದ ವಿವಿಧ ಅಂಗಸಂಸ್ಥೆಗಳಲ್ಲಿ ನಡೆದ ಪ್ರಮುಖ ಕಾರ್ಯಕ್ರಮಗಳು, ಸಂಶೋಧನಾ ಸಾಧನೆಗಳು, ವಿಸ್ತರಣಾ ಚಟುವಟಿಕೆಗಳು, ರೈತಪರ ಕಾರ್ಯಕ್ರಮಗಳು, ವಿದ್ಯಾರ್ಥಿಗಳ ಹಾಗೂ ಸಿಬ್ಬಂದಿಗಳ ಸಾಧನೆಗಳು ಮತ್ತು ಸಮಾಜಮುಖಿ ಕಾರ್ಯಕ್ರಮಗಳನ್ನು ಸಮಗ್ರವಾಗಿ ಈ ಸಂಚಿಕೆಯಲ್ಲಿ ದಾಖಲಿಸಲಾಗಿದೆ.

ಸಹಿ
**(ಬಸವರಾಜ ಅವಟಿ)**
ಮುಖ್ಯ ಸಂಪಾದಕರು ಮತ್ತು ವಿಸ್ತರಣಾ ನಿರ್ದೇಶಕರು

## ಪ್ರಮುಖ ಕಾರ್ಯಕ್ರಮಗಳು

* ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರನ 'ಪಶುವೈದ್ಯಕೀಯ ಶರೀರಕ್ರಿಯಾಶಾಸ್ತ್ರ ಮತ್ತು ಜೀವರಸಾಯನಶಾಸ್ತ್ರ ವಿಭಾಗ'ವು 'ಅನಿಮಲ್ ಫಿಸಿಯಾಲಜಿಸ್ಟ್ಸ್ ಅಸೋಸಿಯೇಷನ್' ಸಹಯೋಗದಲ್ಲಿ 9–10ನೇ ಅಕ್ಟೋಬರ್, 2025ರಂದು "ಎಪಾಕಾನ್–2025" ರಾಷ್ಟ್ರೀಯ ಶರೀರಕ್ರಿಯಾಶಾಸ್ತ್ರ ಸಮ್ಮೇಳನವನ್ನು ಯಶಸ್ವಿಯಾಗಿ ಆಯೋಜಿಸಿತು. "ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವ ಪಶು ಉತ್ಪಾದನೆಗಾಗಿ ಮುಂದಿನ ತಲೆಮಾರಿನ ಶರೀರಕ್ರಿಯಾಶಾಸ್ತ್ರೀಯ ವಿಧಾನಗಳು" ಎಂಬ ವಿಷಯಾಧಾರಿತ ಈ ಸಮ್ಮೇಳನದಲ್ಲಿ ದೇಶದ ವಿವಿಧ ರಾಜ್ಯಗಳಿಂದ ಸುಮಾರು 200ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿ ವೈಜ್ಞಾನಿಕ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದರು.




* ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶನಾಲಯವು ಮ್ಯಾನೇಜ್, ಹೈದರಾಬಾದ್‌ನ ಸಹಯೋಗದಲ್ಲಿ 8–12ನೇ ಸೆಪ್ಟೆಂಬರ್, 2025 ರವರೆಗೆ ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರಿನಲ್ಲಿ ಐದು ದಿನಗಳ "ರಾಷ್ಟ್ರೀಯ ಯುವ ವೃತ್ತಿಪರರ ಅಭಿವೃದ್ಧಿ ಕಾರ್ಯಕ್ರಮ"ವನ್ನು ಆಯೋಜಿಸಿತು. ಕಾರ್ಯಕ್ರಮವನ್ನು ಕುಲಪತಿಗಳಾದ ಪ್ರೊ. ಕೆ.ಸಿ. ವೀರಣ್ಣರವರು ಉದ್ಘಾಟಿಸಿದರು. ಮ್ಯಾನೇಜ್ ಸಂಸ್ಥೆಯ ನಿರ್ದೇಶಕರಾದ ಡಾ. ಸರವಣನ್ ರಾಜ್ ಸೇರಿದಂತೆ ವಿಶ್ವವಿದ್ಯಾಲಯದ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ಭಾರತದ ಆರು ರಾಜ್ಯಗಳಿಂದ ಒಟ್ಟು 42 ಯುವ ವಿಸ್ತರಣಾ ವೃತ್ತಿಪರರು ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಜ್ಞಾನ ಹಾಗೂ ಕೌಶಲ್ಯವನ್ನು ವೃದ್ಧಿಸಿಕೊಂಡರು.



## ಆಯೋಜಿತ ತರಬೇತಿಗಳು/ಕಾರ್ಯಾಗಾರಗಳು/ ಸಮಾವೇಶಗಳು/ ವಿಚಾರ ಸಂಕೀರಣಗಳು/ಪ್ರದರ್ಶನಗಳು/ಪಶು ಆರೋಗ್ಯ ಶಿಬಿರಗಳು / ಕ್ಷೇತ್ರೋತ್ಸವಗಳು

### ವಿಸ್ತರಣಾ ನಿರ್ದೇಶನಾಲಯ, ಕಪಪಮೀವಿವಿ, ಬೀದರ

* ಐಸಿಎಆರ್–ನಾರ್ಮ್ (ICAR-NAARM), ಹೈದರಾಬಾದ್‌ನ ಸಹಯೋಗದಲ್ಲಿ 16ನೇ ಅಕ್ಟೋಬರ್, 2025 ರಂದು ಒಂದು ದಿನದ "ಇಮ್ಮರ್ಷನ್ ಕಾರ್ಯಕ್ರಮ"ವನ್ನು ಆಯೋಜಿಸಲಾಯಿತು. ಕುಲಪತಿಗಳಾದ ಪ್ರೊ. ಕೆ. ಸಿ. ವೀರಣ್ಣರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪಕ ಮಂಡಳಿ ಸದಸ್ಯರಾದ ಶ್ರೀ ಬಸವರಾಜ ಭತಮುರ್ಗೆ ಹಾಗೂ ಇತರ ಅಧಿಕಾರಿಗಳು ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ 18 ಸ್ಟಾರ್ಟ್‌ಅಪ್ ಸಂಸ್ಥೆಗಳು ಹಾಗೂ ಸುಮಾರು 150 ರೈತರು ಮತ್ತು ರೈತ ಉತ್ಪಾದಕರ ಸಂಘಗಳ (ಎಫ್‌ಪಿಒ) ಪ್ರತಿನಿಧಿಗಳು ಭಾಗವಹಿಸಿದರು.



* ಸಮೇತಿ(ಉತ್ತರ), ಕೃಷಿ ವಿಶ್ವವಿದ್ಯಾಲಯ, ಧಾರವಾಡ ಸಹಯೋಗದಲ್ಲಿ 16–18ನೇ ಡಿಸೆಂಬರ್, 2025ರವರೆಗೆ ಉತ್ತರ ಕರ್ನಾಟಕದ ಪಶುವೈದ್ಯಾಧಿಕಾರಿಗಳು ಹಾಗೂ ಆತ್ಮಾ ಸಿಬ್ಬಂದಿಗಳಿಗಾಗಿ "ಸುಸ್ಥಿರ ಪಶುಸಂಗೋಪನೆಗಾಗಿ ನವೀನ ತಂತ್ರಜ್ಞಾನಗಳು" ವಿಷಯದ ಕುರಿತು ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳ 38 ಅಧಿಕಾರಿಗಳು ಭಾಗವಹಿಸಿ ಆಧುನಿಕ ಪಶುಸಂಗೋಪನಾ ತಂತ್ರಜ್ಞಾನಗಳ ಕುರಿತು ಮಾಹಿತಿ ಪಡೆದರು.



### ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು

* ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು ನ ಪಶುವೈದ್ಯಕೀಯ ಸ್ತ್ರೀರೋಗ ಮತ್ತು ಪ್ರಸೂತಿಶಾಸ್ತ್ರ ವಿಭಾಗವು 4–6ನೇ ನವೆಂಬರ್, 2025 ರವರೆಗೆ ಪಶುವೈದ್ಯ ಪದವೀಧರರಿಗಾಗಿ “ನಾಯಿ ಮತ್ತು ಬೆಕ್ಕುಗಳಲ್ಲಿ ಸಂತಾನೋತ್ಪತ್ತಿ ಶಸ್ತ್ರಚಿಕಿತ್ಸೆಗಳು” ಎಂಬ ಶುಲ್ಕಾಧಾರಿತ ಪ್ರಾಯೋಗಿಕ (Hands-on) ತರಬೇತಿಯನ್ನು ಆಯೋಜಿಸಿತು.

### ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ

* ಭಾರತೀಯ ಪಶು ಉತ್ಪಾದನಾ ನಿರ್ವಹಣಾ ಸಂಘದ (ಕರ್ನಾಟಕ ಘಟಕ) 43ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ, 1 ನೇ ಆಗಸ್ಟ್, 2025ರಂದು "ನಿಖರತೆ, ಮೌಲ್ಯವರ್ಧನೆ ಹಾಗೂ ಆರ್ಥಿಕತೆ ಆಧಾರಿತ ಪಶು ಮತ್ತು ಕೋಳಿ ಸಾಕಾಣಿಕೆ" ವಿಷಯದ ಕುರಿತು ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಯಿತು.




* ಡಿಎಸ್‌ಟಿ, ನವದೆಹಲಿ ಪ್ರಾಯೋಜಿತ “ಸ್ಮಾರ್ಟ ಗೋಲ್” ಯೋಜನೆಯಡಿ 5–6ನೇ ಡಿಸೆಂಬರ್, 2025 ರಂದು, ಜಾನುವಾರು ಸಾಕಾಣಿಕಾ ಸಂಕೀರ್ಣದಲ್ಲಿ "ಮಹಿಳಾ ಸಬಲೀಕರಣಕ್ಕಾಗಿ ಮೇಕೆ ಸಾಕಾಣಿಕೆ" ಕುರಿತು ಬಗದಲ ಗ್ರಾಮದ ಫಲಾನುಭವಿಗಳಿಗೆ ಎರಡು ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.




* ಐಸಿಎಆರ್–ಐಐಎಮ್‌ಆರ್, ಹೈದರಾಬಾದ್ ಸಂಸ್ಥೆಯ ಆರ್ಥಿಕ ನೆರವಿನೊಂದಿಗೆ 1ನೇ ಡಿಸೆಂಬರ್, 2025ರಂದು "ಪೌಷ್ಟಿಕತೆ, ಆರೋಗ್ಯ ಮತ್ತು ಮಹಿಳಾ ಉದ್ಯಮಶೀಲತೆಗಾಗಿ ನ್ಯೂಟ್ರಿಮಿಲೆಟ್" ವಿಷಯದ ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಜಾನುವಾರು ಸಾಕಾಣಿಕಾ ಸಂಕೀರ್ಣದಲ್ಲಿ ಆಯೋಜಿಸಲಾಯಿತು.




* 28ನೇ ಸೆಪ್ಟೆಂಬರ್, 2025 ರಂದು ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ ಹಾಗೂ ಹಳೆಯ ವಿದ್ಯಾರ್ಥಿಗಳ ಸಂಘ, ಪ.ವೈ.ಮ. ಬೀದರನ ಸಹಯೋಗದಲ್ಲಿ “ವಿಶ್ವ ರೇಬೀಸ್ ದಿನಾಚರಣೆ” ಆಚರಿಸಲಾಯಿತು. ಈ ಸಂದರ್ಭದಲ್ಲಿ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ (IAH&VB), ಬೀದರನ ಸಹಯೋಗದಲ್ಲಿ 50ಕ್ಕೂ ಹೆಚ್ಚು

ಸಾಕು ನಾಯಿಗಳು ಮತ್ತು ಬೆಕ್ಕುಗಳಿಗೆ ಉಚಿತ ರೇಬೀಸ್ ಲಸಿಕಾ ಶಿಬಿರವನ್ನು ಆಯೋಜಿಸಲಾಯಿತು.



## ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ

* ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗವು ಬಿಂಕದಕಟ್ಟಿ ಪಶುವೈದ್ಯಕೀಯ ಆಸ್ಪತ್ರೆಯ ಸಹಯೋಗದಲ್ಲಿ, ವಿಶ್ವವಿದ್ಯಾಲಯದ ಆರ್ಥಿಕ ನೆರವಿನೊಂದಿಗೆ ಬಿಂಕದಕಟ್ಟಿ ಗ್ರಾಮದಲ್ಲಿ "ರಸಮೇವು (ಸೈಲೇಜ್) ತಯಾರಿಕೆ" ಕುರಿತು ಪ್ರಾತ್ಯಕ್ಷಿಕೆಯನ್ನು ಆಯೋಜಿಸಿತು. ಕಾರ್ಯಕ್ರಮದಲ್ಲಿ 20ಕ್ಕೂ ಹೆಚ್ಚು ರೈತರು ಹಾಗೂ ಬಿ.ವ್ಹಿ.ಎಸ್‌ಸಿ. ಮತ್ತು ಎ.ಎಚ್. ತೃತೀಯ ವರ್ಷದ ವಿದ್ಯಾರ್ಥಿಗಳು ಭಾಗವಹಿಸಿದರು.



* ವಿಶ್ವವಿದ್ಯಾಲಯದ ಆರ್ಥಿಕ ನೆರವಿನೊಂದಿಗೆ 22–23ನೇ ಡಿಸೆಂಬರ್, 2025 ರಂದು "ಜಾನುವಾರು ಸಾಕಾಣಿಕೆಯಲ್ಲಿ ನವೀನ ತಂತ್ರಜ್ಞಾನಗಳು ಹಾಗೂ ಉದ್ಯಮಶೀಲತೆ" ವಿಷಯದ ಕುರಿತು ಎರಡು ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ರಾಜ್ಯದ ವಿವಿಧ ಜಿಲ್ಲೆಗಳಿಂದ 35ಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು.




* ಮಹಾವಿದ್ಯಾಲಯದ ವೃತ್ತಿ ಮಾರ್ಗದರ್ಶನ ಮತ್ತು ನೇಮಕಾತಿ ಘಟಕವು ನಾವಿಕ್ ಅಗ್ರಿಬುಸಿನೆಸ್ಸ್ ಇಂಕುಬೇಷನ್ ಸೆಂಟರ್ ಹಾಗೂ ಐಸಿಎಆರ್–ನಿವೇದಿ, ಬೆಂಗಳೂರು ಸಹಯೋಗದಲ್ಲಿ 19ನೇ ನವೆಂಬರ್, 2025 ರಂದು ಸ್ನಾತಕ ವಿದ್ಯಾರ್ಥಿಗಳಿಗಾಗಿ "ಪಶುಸಂಗೋಪನೆ ಹಾಗೂ ಪಶುವೈದ್ಯಕೀಯ ಕ್ಷೇತ್ರದಲ್ಲಿನ ಉದ್ಯಮಶೀಲತಾ ಅವಕಾಶಗಳು" ವಿಷಯದ ಕುರಿತು ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಿತು.

* ಬಿ.ವ್ಹಿ.ಎಸ್‌ಸಿ. ಮತ್ತು ಎ.ಎಚ್. ತೃತೀಯ ವರ್ಷದ ವಿದ್ಯಾರ್ಥಿಗಳು ಪಶುಸಂಗೋಪನಾ ಇಲಾಖೆ, ಧಾರವಾಡ ಹಾಲು ಒಕ್ಕೂಟ ಹಾಗೂ ಬಿಂಕದಕಟ್ಟಿ ಗ್ರಾಮ ಪಂಚಾಯಿತಿ ಸಹಯೋಗದೊಂದಿಗೆ ಬಿಂಕದಕಟ್ಟಿ ಗ್ರಾಮದಲ್ಲಿ ಪಶು ಆರೋಗ್ಯ ಶಿಬಿರವನ್ನು ಆಯೋಜಿಸಿದರು. ಈ ಶಿಬಿರದ ಮೂಲಕ 60ಕ್ಕೂ ಹೆಚ್ಚು ಜಾನುವಾರುಗಳಿಗೆ ಆರೋಗ್ಯ ತಪಾಸಣೆ, ಚಿಕಿತ್ಸೆ ಹಾಗೂ ಉಚಿತ ಔಷಧ ವಿತರಿಸಲಾಯಿತು. ಜೊತೆಗೆ ಸಾಕು ನಾಯಿಗಳು ಮತ್ತು ಬೆಕ್ಕುಗಳಿಗೆ ರೇಬೀಸ್ ಲಸಿಕೆ ನೀಡಲಾಯಿತು.

* ನವೆಂಬರ್ 15, 2025 ರಂದು ಯೂತ್ ರೆಡ್ ಕ್ರಾಸ್ ಹಾಗೂ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಘಟಕದ ವತಿಯಿಂದ ಗದಗ ಜಿಲ್ಲಾ ರೆಡ್ ಕ್ರಾಸ್ ಸಂಸ್ಥೆ ಮತ್ತು ಅಂಬಿಕಾ ಬ್ಲಡ್ ಬ್ಯಾಂಕ್ ಸಹಯೋಗದಲ್ಲಿ ಮಹಾವಿದ್ಯಾಲಯದ ಆವರಣದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಯಿತು. ಈ ಶಿಬಿರದಲ್ಲಿ 42ಕ್ಕೂ ಹೆಚ್ಚು ದಾನಿಗಳು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿ ಮಾನವೀಯ ಸೇವೆಗೆ ಕೈಜೋಡಿಸಿದರು.

* ಗದಗ ರೋಟರಿ ಕ್ಲಬ್ ಸಹಯೋಗದಲ್ಲಿ ಸಾಕು ನಾಯಿಗಳು ಮತ್ತು ಬೆಕ್ಕುಗಳಿಗೆ ಉಚಿತ ರೇಬೀಸ್ ಲಸಿಕಾ ಶಿಬಿರವನ್ನು ಆಯೋಜಿಸಲಾಯಿತು. 50ಕ್ಕೂ ಹೆಚ್ಚು ಸಾಕುಪ್ರಾಣಿಗಳಿಗೆ ಲಸಿಕೆ ನೀಡಲಾಗಿದ್ದು, ಲಸಿಕಾ ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ಜೊತೆಗೆ ಸಾರ್ವಜನಿಕರು ಹಾಗೂ ಸಾಕುಪ್ರಾಣಿ ಮಾಲೀಕರಿಗೆ ಹುಚ್ಚುನಾಯಿ ರೋಗದ ತಡೆ ಮತ್ತು ಜಾಗೃತಿ ಕುರಿತು ಮಾಹಿತಿ ನೀಡಲಾಯಿತು.




## ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ

* ಹಾಸನ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳ 50ಕ್ಕೂ ಹೆಚ್ಚು ರೈತರಿಗಾಗಿ, ಇಂಡಿಯಾ ಎನಿಮಲ್ ನ್ಯೂಟ್ರಿಷನ್ ಪ್ರೈ.ಲಿ. ಸಹಯೋಗದಲ್ಲಿ 12ನೇ ಆಗಸ್ಟ್, 2025 ರಂದು "ವೈಜ್ಞಾನಿಕ ಹಂದಿ ಸಾಕಾಣಿಕೆ" ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.



* 13–15ನೇ ನವೆಂಬರ್, 2025 ರವರೆಗೆ ರೈತರಿಗಾಗಿ ಮೂರು ದಿನಗಳ "ವೈಜ್ಞಾನಿಕ ಕೋಳಿ ಸಾಕಾಣಿಕೆ" ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ತರಬೇತಿಯಲ್ಲಿ ವಿವಿಧ ಕೋಳಿ ತಳಿಗಳು, ವಸತಿ ವ್ಯವಸ್ಥೆ, ವೈಜ್ಞಾನಿಕ ಆಹಾರ ನಿರ್ವಹಣೆ, ಲಸಿಕಾ ಕಾರ್ಯಕ್ರಮಗಳು ಹಾಗೂ ರೋಗ ನಿಯಂತ್ರಣ ಕುರಿತು ಸಮಗ್ರ ಮಾಹಿತಿ ನೀಡಲಾಯಿತು.

* ತಮಿಳುನಾಡು ಪಶುವೈದ್ಯಕೀಯ ಮತ್ತು ಪಶು ವಿಜ್ಞಾನಗಳ ವಿಶ್ವವಿದ್ಯಾಲಯ (TANUVAS) ಅಡಿಯಲ್ಲಿ ಪಶುವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ನಮಕ್ಕಲ್‌ನಲ್ಲಿ ಜುಲೈ 31 ರಿಂದ ಆಗಸ್ಟ್ 1, 2025ರವರೆಗೆ ನಡೆದ 15ನೇ ರಾಷ್ಟ್ರೀಯ ಕ್ಲಿನಿಕಲ್ ಕೇಸ್ ಸಮಾವೇಶದಲ್ಲಿ ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನದ ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ಮಾಡಿದರು. ಈ ಸ್ಪರ್ಧೆಯಲ್ಲಿ 4 ಸ್ನಾತಕೋತ್ತರ ಹಾಗೂ 24 ಪದವಿ ವಿದ್ಯಾರ್ಥಿಗಳು ಭಾಗವಹಿಸಿದ್ದು, ವಿವಿಧ ವಿಭಾಗಗಳಲ್ಲಿ ಒಟ್ಟು 10 ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡು ವಿಶ್ವವಿದ್ಯಾಲಯಕ್ಕೆ ಕೀರ್ತಿ ತಂದಿದ್ದಾರೆ.



### ಹೈನುಗಾರಿಕೆ ಮಹಾವಿದ್ಯಾಲಯ, ಬೆಂಗಳೂರು

* ಹೈನುಗಾರಿಕೆ ಮಹಾವಿದ್ಯಾಲಯ, ಬೆಂಗಳೂರಿನ ಹೈನು ತಂತ್ರಜ್ಞಾನ ವಿಭಾಗವು 18–20ನೇ ಸೆಪ್ಟೆಂಬರ್, 2025 ರವರೆಗೆ ಮೂರು ದಿನಗಳ "ಮೌಲ್ಯವರ್ಧಿತ ಶೈತ್ಯೀಕೃತ ಹಾಲಿನ ಉತ್ಪನ್ನಗಳ ತಯಾರಿಕೆ" ಕುರಿತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿತು. ತರಬೇತಿಯಲ್ಲಿ ಸುಮಾರು 40 ರೈತರು ಭಾಗವಹಿಸಿದರು.



* ಹೈನುಗಾರಿಕೆ ಮಹಾವಿದ್ಯಾಲಯ, ಬೆಂಗಳೂರಿನ ವಿದ್ಯಾರ್ಥಿಗಳಿಗಾಗಿ 19ನೇ ಆಗಸ್ಟ್, 2025ರಂದು "ನಾಯಕತ್ವದ ಮೂಲಕ ಯಶಸ್ಸು ಹಾಗೂ ವೃತ್ತಿ ಮಾರ್ಗದರ್ಶನ" ವಿಷಯದ ಕುರಿತು ವಿಶೇಷ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

### ಹೈನುಗಾರಿಕೆ ಮಹಾವಿದ್ಯಾಲಯ, ಮಹಾಗಾಂವ ಕ್ರಾಸ್, ಕಲಬುರಗಿ

* ಕಲಬುರಗಿ ಹಾಲು ಒಕ್ಕೂಟದ ಸಿಬ್ಬಂದಿಗಳಿಗಾಗಿ "ಹಾಲು ಮತ್ತು ಹಾಲಿನ ಉತ್ಪನ್ನಗಳ ಪೌಷ್ಟಿಕ ಮೌಲ್ಯ" ಕುರಿತು 10ನೇ ಡಿಸೆಂಬರ್, 2025 ರಂದು ವಿಶೇಷ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.



### ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು

* ಮೀನು ಸಂಸ್ಕರಣಾ ತಂತ್ರಜ್ಞಾನ ವಿಭಾಗವು ಸಹ್ಯಾದ್ರಿ ಸಮುದಾಯ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣ ಸಂಘ (SCODWES), ಶಿರಸಿ ಹಾಗೂ ಕರಾವಳಿ ಸಮೃದ್ಧಿ ಮೀನುಗಾರರ ಸಹಕಾರ ಸಂಘ, ಕೊಡೇರಿ ಸಹಯೋಗದಲ್ಲಿ 15ನೇ ಜುಲೈ, 2025ರಂದು ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ "ಮೀನು ಮೌಲ್ಯವರ್ಧನೆ" ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿತು.



* 26ನೇ ಜುಲೈ, 2025 ರಂದು ಮೀನುಗಾರಿಕೆ ಮಹಾವಿದ್ಯಾಲಯದಲ್ಲಿ "ರಾಷ್ಟ್ರೀಯ ಮೀನುಗಾರರ ದಿನಾಚರಣೆ–2025"ಅನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ವಿಶ್ವವಿದ್ಯಾಲಯದ ವ್ಯವಸ್ಥಾಪಕ ಮಂಡಳಿ ಸದಸ್ಯರಾದ ಡಾ. ಸುಶಾಂತ್ ರೈ ಕಾರ್ಯಕ್ರಮವನ್ನು ಉದ್ಘಾಟಿಸಿದರು. ವಿಸ್ತರಣಾ ನಿರ್ದೇಶಕರಾದ ಡಾ. ಬಸವರಾಜ ಅವಟಿ ಸೇರಿದಂತೆ ವಿಶ್ವವಿದ್ಯಾಲಯದ ಅಧಿಕಾರಿಗಳು ಉಪಸ್ಥಿತರಿದ್ದರು.



* ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ, ಕೃಷಿ ವಿಶ್ವವಿದ್ಯಾಲಯ, ರಾಯಚೂರು ಸಹಯೋಗದಲ್ಲಿ 10–12ನೇ ಡಿಸೆಂಬರ್, 2025ರವರೆಗೆ ಸ್ಟುಡೆಂಟ್ ರೆಡಿ ಪ್ರೋಗ್ರಾಮ್ ಅಡಿಯಲ್ಲಿ ಮೀನು ಸಂಸ್ಕರಣೆ ಮತ್ತು ಸಾಗರೋತ್ಪನ್ನಗಳ ಕುರಿತು ಅಗ್ರೋ ಇಂಡಸ್ಟ್ರಿಯಲ್ ಅಟ್ಯಾಚಮೆಂಟ್ (ಎಐಎ) ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.



## ವನ್ಯಜೀವಿ ಪಶುವೈದ್ಯಕೀಯ ಸಂಶೋಧನಾ ಸಂಸ್ಥೆ, ಕೊಡಗು

* 11ನೇ ಜುಲೈ, 2025ರಂದು ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನದ ಸಹಯೋಗದಲ್ಲಿ "ವನ್ಯಜೀವಿಗಳಿಂದ ಹರಡುವ ಪ್ರಾಣಿಜನ್ಯ ರೋಗಗಳು" ವಿಷಯದ ಕುರಿತು ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಯಿತು. ಕೊಡಗು ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಅಶೋಕ್ ಎಸ್. ಆಲೂರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಕಾರ್ಯಾಗಾರದಲ್ಲಿ ಕೊಡಗು ವಿಶ್ವವಿದ್ಯಾಲಯದ 150ಕ್ಕೂ ಹೆಚ್ಚು ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಭಾಗವಹಿಸಿದ್ದರು.

* 20ನೇ ಡಿಸೆಂಬರ್, 2025ರಂದು ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರಿನ 'ಎ.ಐ.ಸಿ.ಆರ್.ಪಿ. ಆನ್ ಪೌಲ್ಟ್ರಿ' ಯೋಜನೆಯ ಸಹಯೋಗದಲ್ಲಿ "ಸುಧಾರಿತ ಕೋಳಿ ಸಾಕಾಣಿಕೆ" ಕುರಿತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮವನ್ನು ಮಾನ್ಯ ವ್ಯವಸ್ಥಾಪಕ ಮಂಡಳಿ ಸದಸ್ಯರಾದ ಡಾ. ಸುಶಾಂತ್ ರೈರವರು ಉದ್ಘಾಟಿಸಿದರು.




## ಜಾನುವಾರು ಸಂಶೋಧನೆ ಮತ್ತು ಮಾಹಿತಿ ಕೇಂದ್ರ (ದೇವಣಿ), ಬೀದರ

* ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಬೆಂಗಳೂರಿನ ಆರ್ಥಿಕ ನೆರವಿನೊಂದಿಗೆ 15–18ನೇ ಜುಲೈ, 2025 ರವರೆಗೆ "ಆದಾಯ ಹೆಚ್ಚಳ ಮತ್ತು ಸುಸ್ಥಿರತೆಗೆ ವೈಜ್ಞಾನಿಕ ಪಶುಸಂಗೋಪನೆ" ಕುರಿತು ನಾಲ್ಕು ದಿನಗಳ ವಿಶೇಷ ತರಬೇತಿ ಕಾರ್ಯಕ್ರಮವನ್ನು ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರನಲ್ಲಿ ಆಯೋಜಿಸಲಾಯಿತು. ಚಿತ್ರದುರ್ಗ, ರಾಯಚೂರು, ಕಲಬುರಗಿ ಹಾಗೂ ಬೀದರ ಜಿಲ್ಲೆಗಳಿಂದ ಆಗಮಿಸಿದ 35 ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತರು ತರಬೇತಿಯಲ್ಲಿ ಭಾಗವಹಿಸಿದರು.



* ಭಾಲ್ಕಿ ತಾಲ್ಲೂಕಿನ ಹುಣಜಿ ಗ್ರಾಮದಲ್ಲಿ 27ನೇ ನವೆಂಬರ್, 2025ರಂದು ಪಶುವೈದ್ಯಕೀಯ ಮತ್ತು ಪಶುಸಂಗೋಪನೆ ಇಲಾಖೆ, ಬೀದರನ ಸಹಯೋಗದಲ್ಲಿ "ರಸಮೇವು(ಸೈಲೇಜ್) ತಯಾರಿಕೆ ಹಾಗೂ ಒಣ ಮೇವು ಪೌಷ್ಟೀಕರಣ" ಕುರಿತು ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ 53 ರೈತರು ಭಾಗವಹಿಸಿ, ಮೇವು ಸಂರಕ್ಷಣೆ ಹಾಗೂ ಪೌಷ್ಟೀಕರಣ ಕುರಿತು ಪ್ರಾಯೋಗಿಕ ಮಾಹಿತಿ ಪಡೆದರು.



## ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಭೂತನಾಳ–ವಿಜಯಪುರ

* ರಾಷ್ಟ್ರೀಯ ಮೀನುಗಾರರ ದಿನಾಚರಣೆಯ ಅಂಗವಾಗಿ ಮೀನುಗಾರಿಕೆ ಇಲಾಖೆ ಸಹಯೋಗದಲ್ಲಿ 10ನೇ ಜುಲೈ, 2025ರಂದು "ಮೀನುಗಾರಿಕೆ ಕ್ಷೇತ್ರದಲ್ಲಿ ಕಿಸಾನ್ ಕ್ರೆಡಿಟ್ ಕಾರ್ಡ್ (ಕೆಸಿಸಿ) ಯೋಜನೆಯ ಪರಿಚಯ" ವಿಷಯದ ಕುರಿತು ಕಾರ್ಯಾಗಾರವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ 65ಕ್ಕೂ ಹೆಚ್ಚು ಮೀನುಗಾರರು ಹಾಗೂ ಮೀನು ಕೃಷಿಕರು ಭಾಗವಹಿಸಿ, ಅಭಿವೃದ್ಧಿ ಯೋಜನೆಗಳ ಕುರಿತು ಮಾಹಿತಿ ಪಡೆದರು.



* ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ 50ಕ್ಕೂ ಹೆಚ್ಚು ರೈತರಿಗಾಗಿ, ಕರ್ನಾಟಕ ರೈತ ಸಂಪನ್ಮೂಲ ಕೇಂದ್ರ, ಬಾಗಲಕೋಟೆ ಸಹಯೋಗದಲ್ಲಿ 30–31ನೇ ಜುಲೈ, 2025 ರಂದು ಎರಡು ದಿನಗಳ "ಮೀನು ಕೃಷಿ" ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.



* 20ನೇ ಆಗಸ್ಟ್, 2025ರಂದು ಡಿಎಟಿಸಿ, ವಿಜಯಪುರ ಸಹಯೋಗದಲ್ಲಿ "ಸಂಯೋಜಿತ ಮೀನು ಕೃಷಿ" ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು. ಮೀನು ಸಾಕಾಣಿಕೆಯನ್ನು ಕೃಷಿ ಹಾಗೂ ಪಶುಸಂಗೋಪನೆಯೊಂದಿಗೆ ಸಂಯೋಜಿಸಿ ಹೆಚ್ಚುವರಿ ಆದಾಯ ಗಳಿಸುವ ವಿಧಾನಗಳ ಕುರಿತು 50ಕ್ಕೂ ಹೆಚ್ಚು ರೈತರಿಗೆ ಮಾಹಿತಿ ನೀಡಲಾಯಿತು.



* ಕರ್ನಾಟಕ ರಾಜ್ಯ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ ಸಹಯೋಗದಲ್ಲಿ 30ನೇ ಸೆಪ್ಟೆಂಬರ್, 2025ರಂದು "ಮೀನುಗಾರಿಕೆ ಚಟುವಟಿಕೆಗಳಲ್ಲಿ ಮಹಿಳೆಯರ ಕೌಶಲ್ಯಾಭಿವೃದ್ಧಿ" ಕುರಿತು ಕಾರ್ಯಾಗಾರವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ 90ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಭಾಗವಹಿಸಿದ್ದರು.




* 4ನೇ ಅಕ್ಟೋಬರ್, 2025 ರಂದು ಕಲಬುರಗಿಯ ಶ್ರೀ ಬಸವಪ್ರಭು ಪ್ರಥಮ ದರ್ಜೆ ಮಹಾವಿದ್ಯಾಲಯದ 12 ವಿದ್ಯಾರ್ಥಿಗಳಿಗಾಗಿ "ಮೀನುಗಾರಿಕೆ ಮತ್ತು ಜಲಕೃಷಿ ಕ್ಷೇತ್ರದಲ್ಲಿನ ಅವಕಾಶಗಳು" ಕುರಿತು ವಿಶೇಷ ಕಾರ್ಯಾಗಾರವನ್ನು ಆಯೋಜಿಸಲಾಯಿತು.

* ಎನ್.ಆರ್.ಎಲ್.ಎಮ್., ಜಿಲ್ಲಾ ಪಂಚಾಯತ, ವಿಜಯಪುರ ಹಾಗೂ ಮೀನುಗಾರಿಕೆ ಇಲಾಖೆ, ವಿಜಯಪುರದ ಧನ ಸಹಾಯದಿಂದ, ಮತ್ಸ್ಯ ಸಂಜೀವಿನಿ ಯೋಜನೆಯಡಿ 16–17ನೇ ನವೆಂಬರ್, 2025ರಂದು ವಿಜಯಪುರದಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರಿಗಾಗಿ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು. ಸುಮಾರು 50 ಮಹಿಳೆಯರು ಭಾಗವಹಿಸಿದ್ದರು.




* 5ನೇ ನವೆಂಬರ್, 2025 ರಂದು ವಿಜಯಪುರದ ಎಸ್‌ಬಿ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಬಿ.ಎಸ್ಸಿ. ಅಂತಿಮ ವರ್ಷದ ವಿದ್ಯಾರ್ಥಿಗಳಿಗಾಗಿ "ಮೀನುಗಾರಿಕೆ ಮತ್ತು ಜಲಚರ ಸಾಕಣೆ ಅಭ್ಯಾಸಗಳಲ್ಲಿ ಕೌಶಲ್ಯ ಅಭಿವೃದ್ಧಿ" ಕುರಿತು ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಯಿತು. ಹಾಗೆಯೇ, ನವೆಂಬರ್ 19, 2025 ರಂದು ವಿಜಯಪುರದ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಬಿ.ಎಸ್ಸಿ. ಅಂತಿಮ ವರ್ಷದ ವಿದ್ಯಾರ್ಥಿಗಳಿಗೂ ಇದೇ ರೀತಿಯ ಕಾರ್ಯಕ್ರಮವನ್ನು ಆಯೋಜಿಸಲಾಯಿತು.




* 11ನೇ ನವೆಂಬರ್, 2025ರಂದು ಮೀನುಗಾರರ ಸಹಕಾರ ಸಂಘ, ಚಡಚಣ, ವಿಜಯಪುರದ ಸದಸ್ಯರಿಗೆ "ನದಿ ಮೀನುಗಾರಿಕೆಯಲ್ಲಿ ಆಧುನಿಕ ತಂತ್ರಜ್ಞಾನ, ಸಂಪನ್ಮೂಲ ನಿರ್ವಹಣೆ ಹಾಗೂ ಮೀನು ಉತ್ಪಾದನೆ" ಕುರಿತು ವಿಶೇಷ ತರಬೇತಿ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ 80ಕ್ಕೂ ಹೆಚ್ಚು ಮೀನುಗಾರರು ಭಾಗವಹಿಸಿದ್ದರು.

**ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಹೆಬ್ಬಾಳ, ಬೆಂಗಳೂರು**

* ಎಫ್‌ಎಫ್‌ಟಿ, ಬೆಂಗಳೂರು ಸಹಯೋಗದಲ್ಲಿ ಮೂರು ದಿನಗಳ "ಅಲಂಕಾರಿಕ ಮೀನು ಸಾಕಾಣಿಕೆಯ ಮೂಲಕ ಉದ್ಯಮಶೀಲತಾ ಅಭಿವೃದ್ಧಿ" ಕುರಿತು ಪ್ರಾಯೋಗಿಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ ಸುಮಾರು 20 ಶಿಬಿರಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಅಲಂಕಾರಿಕ ಮೀನು ಸಾಕಾಣಿಕೆ, ಸಂವರ್ಧನೆ ಹಾಗೂ ಮಾರುಕಟ್ಟೆ ನಿರ್ವಹಣೆಯ ಕುರಿತು ಮಾಹಿತಿ ಪಡೆದರು.



**ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ**

* ಬಂಟವಾಳ ತಾಲೂಕಿನ ಪೆರಾಯಿ ಗ್ರಾಮದಲ್ಲಿ 10ನೇ ಜುಲೈ, 2025 ರಂದು ಕ್ಯಾಥೋಲಿಕ್ ಚರ್ಚ್, ತೋಟಗಾರಿಕೆ ಇಲಾಖೆ ಮತ್ತು ಕೃಷಿ ಇಲಾಖೆಯ ಸಹಯೋಗದೊಂದಿಗೆ "ಮಲ್ಲಿಗೆ, ಅಡಿಕೆ ಮತ್ತು ತೆಂಗಿನಕಾಯಿಗಳ ವೈಜ್ಞಾನಿಕ ಕೃಷಿ ಪದ್ಧತಿಗಳು" ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಒಟ್ಟು 78 ರೈತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

* ಬಂಟವಾಳ ತಾಲೂಕಿನ ಪುಣಚ ಗ್ರಾಮದ ಶ್ರೀ ಶಿವರಾಮ ನಾಯಕ್ ಅವರ ಕೋಳಿ ಸಾಕಣೆ ಕೇಂದ್ರದಲ್ಲಿ 'ಟಿಎಸ್‌ಪಿ' ಕಾರ್ಯಕ್ರಮದಡಿಯಲ್ಲಿ 10ನೇ ಸೆಪ್ಟೆಂಬರ್, 2025 ರಂದು ವೈಜ್ಞಾನಿಕ ಹಿತ್ತಲಿನ ಕೋಳಿ ಸಾಕಣೆ, ವಿಶೇಷವಾಗಿ ಸ್ವರ್ಣಧಾರ ಕೋಳಿ ಸಾಕಣೆ ಕುರಿತು ರೈತರ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಸುತ್ತಮುತ್ತಲಿನ ಹಳ್ಳಿಗಳ ಸುಮಾರು 30 ರೈತರು ಈ ಕಾರ್ಯಕ್ರಮದ ಮೂಲಕ ಪ್ರಯೋಜನ ಪಡೆದರು.



* ಬಂಟವಾಳ ತಾಲೂಕಿನ ಪುಣಚ ಗ್ರಾಮದಲ್ಲಿ ತಮ್ಮ ಜಮೀನಿನಲ್ಲಿ ಎರೆಹುಳು ಗೊಬ್ಬರವನ್ನು ಯಶಸ್ವಿಯಾಗಿ ಅಭ್ಯಾಸ ಮಾಡುತ್ತಿರುವ ಪ್ರಗತಿಪರ ರೈತ ಶ್ರೀ ಕೃಷ್ಣ ನಾಯಕ್ ಅವರ ತೋಟಕ್ಕೆ 10ನೇ ಸೆಪ್ಟೆಂಬರ್, 2025 ರಂದು ಟಿಎಸ್‌ಪಿ ಕಾರ್ಯಕ್ರಮದಡಿಯಲ್ಲಿ ಸಿಡಿಪಿ–ಕಮ್–ಎಕ್ಸ್‌ಪೋಸರ್ ಭೇಟಿ ನೀಡಲಾಯಿತು. ಸಾವಯವ ಕೃಷಿಯನ್ನು ಉತ್ತೇಜಿಸಲು ಐದು ಫಲಾನುಭವಿಗಳಿಗೆ ಎರೆಹುಳು ಗೊಬ್ಬರದ ಚೀಲಗಳನ್ನು ನೀಡಲಾಯಿತು.



* 13ನೇ ನವೆಂಬರ್, 2025 ರಂದು ಬಂಟವಾಳ ತಾಲ್ಲೂಕಿನ ಪಿಲಿಂಜ ಗ್ರಾಮದಲ್ಲಿ ಬ್ಯಾಂಕ್ ಆಫ್ ಬರೋಡಾ ಮತ್ತು ವಿಜಯ ಗ್ರಾಮೀಣಾಭಿವೃದ್ಧಿ ಪ್ರತಿಷ್ಠಾನ (ನೋ) ಸಹಯೋಗದೊಂದಿಗೆ ಬುಡಕಟ್ಟು ರೈತರಿಗಾಗಿ "ತೋಟಗಾರಿಕಾ ಬೆಳೆಗಳು ಮತ್ತು ಕೃಷಿ ಹೊಂಡಗಳಲ್ಲಿ ಮೀನು ಕೃಷಿ ಸಾಮರ್ಥ್ಯ ಅಭಿವೃದ್ಧಿ" ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಸುಮಾರು 57 ರೈತರು ಈ ಕಾರ್ಯಕ್ರಮದ ಮೂಲಕ ಪ್ರಯೋಜನ ಪಡೆದರು.



* ಪ್ರಾಥಮಿಕ ರೈತರ ಸಹಕಾರ ಸಂಘ, ಕಡಬದಲ್ಲಿ 'ಮಣ್ಣು ಪರೀಕ್ಷಾ ಪ್ರಯೋಗಾಲಯ'ವನ್ನು 24ನೇ ನವೆಂಬರ್, 2025 ರಂದು ಗೌರವಾನ್ವಿತ ಸಂಸತ್ ಸದಸ್ಯರಾದ ಕ್ಯಾಪ್ಟನ್ ಬ್ರಿಜೇಶ್ ಚೌಟ ಉದ್ಘಾಟಿಸಿದರು. ಮಣ್ಣು ಮತ್ತು ಬೆಳೆ ಪೋಷಣೆಯ ಬಗ್ಗೆ ತಿಳುವಳಿಕೆಯುಳ್ಳ ನಿರ್ಧಾರಗಳನ್ನು ತೆಗೆದುಕೊಳ್ಳಲು ಆಧುನಿಕ ಮಣ್ಣು ಪರೀಕ್ಷಾ ಸೌಲಭ್ಯಗಳು ಅನುವು ಮಾಡಿಕೊಡುತ್ತವೆ ಎಂದು ಅವರು ಒತ್ತಿ ಹೇಳಿದರು. ಒಟ್ಟು 82 ರೈತರು ಮತ್ತು ರೈತ ಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



* ಪ್ರಾಥಮಿಕ ಕೃಷಿ ಸಹಕಾರ ಸಂಘ, ಮುಂಡೂರು, ಪುತ್ತೂರು ತಾಲ್ಲೂಕಿನಲ್ಲಿ 15ನೇ ಅಕ್ಟೋಬರ್, 2025 ರಂದು ಬುಡಕಟ್ಟು ರೈತರಿಗಾಗಿ "ಡೊಲಮೈಟ್ ಬಳಸಿ ಮಣ್ಣಿನ ಆಮ್ಲೀಯತೆಯ ನಿರ್ವಹಣೆ" ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದ ಭಾಗವಾಗಿ 25 ರೈತರಿಗೆ ಸುಮಾರು 200 ಕೆಜಿ ಡೊಲಮೈಟ್ ವಿತರಿಸಲಾಯಿತು.



* 15 ನೇ ಅಕ್ಟೋಬರ್, 2025 ರಂದು ಪುತ್ತೂರು ತಾಲ್ಲೂಕಿನ ಮುಂಡೂರಿನ ಪಿ.ಎ.ಸಿ.ಸಿ.ಎಸ್. ನಲ್ಲಿ ರೈತರು/ಕೃಷಿ ಮಹಿಳೆಯರಿಗೆ



"ಅಡಿಕೆಯಲ್ಲಿ ಸಮಗ್ರ ರೋಗಗಳ ನಿರ್ವಹಣೆ" ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ನಡೆಸಲಾಯಿತು. ಈ ಕಾರ್ಯಕ್ರಮದ ಮೂಲಕ 35 ರೈತರು ಪ್ರಯೋಜನ ಪಡೆದರು.

* 9ನೇ ಡಿಸೆಂಬರ್, 2025 ರಂದು ಬೆಳುವಾಯಿಯಲ್ಲಿ ತೋಟಗಾರಿಕೆ ಇಲಾಖೆ, ಪಿ.ಎ.ಸಿ.ಸಿ.ಎಸ್. ಬೆಳುವಾಯಿ ಮತ್ತು ರೈತ ಜನ್ಯ ರೈತ ಉತ್ಪಾದಕ ಕಂಪನಿ ಲಿಮಿಟೆಡ್, ಮೂಡುಬಿದ್ರೆ ಇವರ ಸಹಯೋಗದೊಂದಿಗೆ "ಸಮಗ್ರ ಎಲೆ ಚುಕ್ಕೆ ರೋಗ ನಿರ್ವಹಣೆ"ಯ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಒಟ್ಟು 100 ರೈತರು ಮತ್ತು ಇಲಾಖೆ ಅಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



* "ಗೋಡಂಬಿಯಲ್ಲಿ ಟೀ ಸೊಳ್ಳೆ ಕೀಟದ ಸಮಗ್ರ ನಿರ್ವಹಣೆ"ಯ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು 15ನೇ ಅಕ್ಟೋಬರ್, 2025 ರಂದು ಪೂನಾಚ್ ಗ್ರಾಮದಲ್ಲಿ ಟಿಎಸ್‌ಪಿ ಕಾರ್ಯಕ್ರಮದಡಿಯಲ್ಲಿ ಆಯೋಜಿಸಲಾಗಿತ್ತು. ಒಟ್ಟು 25 ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಇದಲ್ಲದೇ, ಆಯ್ದ ಐದು ರೈತರಿಗೆ ಪ್ರಮುಖವಾದ ಇನ್‌ಪುಟ್‌ಗಳನ್ನು ವಿತರಿಸಲಾಯಿತು.



## ರಾಷ್ಟ್ರಿಯ ಸೇವಾ ಯೋಜನೆಯ ಚಟುವಟಿಕೆಗಳು (ಎನ್.ಎಸ್.ಎಸ್.)

### ಹೈನುಗಾರಿಕೆ ಮಹಾವಿದ್ಯಾಲಯ, ಬೆಂಗಳೂರು

* ಹೈನುಗಾರಿಕೆ ಮಹಾವಿದ್ಯಾಲಯ, ಬೆಂಗಳೂರಿನ ರಾಷ್ಟ್ರೀಯ ಸೇವಾ ಯೋಜನೆ ಘಟಕವು 1–7ನೇ ಡಿಸೆಂಬರ್, 2025ರವರೆಗೆ ಕೋಲಾರ ಜಿಲ್ಲೆಯ ಕುಂಬಾರಹಳ್ಳಿ ಗ್ರಾಮದಲ್ಲಿ ವಿಶೇಷ ಗ್ರಾಮೀಣ ಶಿಬಿರವನ್ನು ಆಯೋಜಿಸಿತು.



## ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು

* ಕಪಪಮೀವಿವಿ, ಬೀದರನ 19 ನೇ ಅಂತರ–ಮಹಾವಿದ್ಯಾಲಯ ಕ್ರೀಡಾಕೂಟವನ್ನು ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರಿನಲ್ಲಿ 5–9 ನೇ ನವೆಂಬರ್, 2025 ರಂದು ಯಶಸ್ವಿಯಾಗಿ

ಆಯೋಜಿಸಲಾಯಿತು. ವಿಶ್ವವಿದ್ಯಾಲಯದ ಒಂಬತ್ತು ಮಹಾವಿದ್ಯಾಲಯಗಳ ತಂಡಗಳು ವಿವಿಧ ಕ್ರೀಡಾಕೂಟಗಳಲ್ಲಿ ಉತ್ಸಾಹದಿಂದ ಭಾಗವಹಿಸಿದರು. ಫಲಿತಾಂಶಗಳ ವಿವರಗಳು ಈ ಕೆಳಗಿನಂತಿವೆ.

- ಕ್ರೀಡಾಕೂಟ ವಿಜೇತರು–ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ
- ಕ್ರೀಡಾಕೂಟ ದ್ವಿತೀಯ ಸ್ಥಾನ–ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ



- ಗುಂಪು ಕ್ರೀಡೆಗಳು: ವಿಜೇತರು – ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
- ಗುಂಪು ಕ್ರೀಡೆಗಳು: ದ್ವಿತೀಯ ಸ್ಥಾನ – ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ

* ಕಪಪಮೀವಿವಿ, ಬೀದರನ 19ನೇ ಅಂತರ ಮಹಾವಿದ್ಯಾಲಯ ಯುವಜನೋತ್ಸವ 'ಕಲಾ ಸುರಭಿ'ಯನ್ನು ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನದಲ್ಲಿ 16–18ನೇ ಅಕ್ಟೋಬರ್, 2025 ರವರೆಗೆ ನಡೆಸಲಾಯಿತು. ವಿಶ್ವವಿದ್ಯಾಲಯದ ಒಂಬತ್ತು ಮಹಾವಿದ್ಯಾಲಯಗಳ ತಂಡಗಳು ಯುವಜನೋತ್ಸವದಲ್ಲಿ ಸ್ಪರ್ಧೆಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು. ಫಲಿತಾಂಶಗಳ ವಿವರಗಳು ಇಲ್ಲಿವೆ.

- ವಿಜೇತರು: ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ
- ದ್ವಿತೀಯ ಸ್ಥಾನ: ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು

## ಪ್ರಶಸ್ತಿಗಳು ಮತ್ತು ಗೌರವಗಳು

| # | ಹೆಸರು / ಸಂಸ್ಥೆ | ಪ್ರಶಸ್ತಿಗಳು | ದಿನಾಂಕ/ವರ್ಷ | ಆಯೋಜಕರು |
|---|---|---|---|---|
| 01 | ಡಾ. ವಿಜಯಕುಮಾರ ಎಸ್. ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಭೂತನಾಳ, ವಿಜಯಪುರ | ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ–2024 | 9ನೇ ಅಕ್ಟೋಬರ್, 2025 | ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು |
| 02 | ಡಾ. ಶ್ರೀಕಾಂತ್ ಕುಲಕರ್ಣಿ ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ | ಅನಿಮಲ್ ಫಿಸಿಯಾಲಜಿಸ್ಟ್ ಅಸೋಸಿಯೇಷನ್ ಫೆಲೊ -2024 | 9-10 ನೇ, ಅಕ್ಟೋಬರ್, 2025 | ಎಪಾಕಾನ್–2025 ರಾಷ್ಟ್ರೀಯ ಸಮ್ಮೇಳನ |
| 03 | ಡಾ. ವಿಜಯಕುಮಾರ ಎಸ್. ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಭೂತನಾಳ, ವಿಜಯಪುರ | ಅತ್ಯುತ್ತಮ ಮೀನುಗಾರಿಕೆ ವಿಜ್ಞಾನಿ ಪ್ರಶಸ್ತಿ–2025 | 13-15 ನೇ ನವೆಂಬರ್, 2025 | 9ನೇ ಅಂತರರಾಷ್ಟ್ರೀಯ ಸಮ್ಮೇಳನ, ಮೈಸೂರು ವಿಶ್ವವಿದ್ಯಾಲಯ, ಮೈಸೂರು |

**ಪ್ರಧಾನ ಸಂಪಾದಕರು**
**ಡಾ. ಬಸವರಾಜ ಅವಟಿ**
ವಿಸ್ತರಣಾ ನಿರ್ದೇಶಕರು,
ಕಪಪಮೀವಿವಿ, ಬೀದರ

**ಸಹ ಸಂಪಾದಕರು**
**ಡಾ. ಪ್ರಕಾಶಕುಮಾರ ರಾಠೋಡ**
ಸಹ ಪ್ರಾಧ್ಯಾಪಕರು,
ವಿಸ್ತರಣಾ ನಿರ್ದೇಶನಾಲಯ,
ಕಪಪಮೀವಿವಿ, ಬೀದರ

**ಸಹಾಯಕ ಸಂಪಾದಕರು**
**ಡಾ. ಆಕಾಶ**
ಸಹಾಯಕ ಪ್ರಾಧ್ಯಾಪಕರು
ವಿಸ್ತರಣಾ ನಿರ್ದೇಶನಾಲಯ,
ಕಪಪಮೀವಿವಿ, ಬೀದರ

ಮುದ್ರಿತ ವಿಷಯ                                        ತೆರೆದ ಅಂಚೆ
ಇವರಿಗೆ,

......................................................................

......................................................................

ಬಟವಡೆಯಾಗದಿದ್ದಲ್ಲಿ ಈ ವಿಳಾಸಕ್ಕೆ ಹಿಂದಿರುಗಿಸಿ :
**ವಿಸ್ತರಣಾ ನಿರ್ದೇಶಕರು**
ಕಪಪಮೀವಿವಿ ನಂದಿನಗರ, ಅಂಚೆ ಪೆಟ್ಟಿಗೆ ಸಂಖ್ಯೆ : 06, ಬೀದರ–585 226, ಕರ್ನಾಟಕ
ಮಿಂಚಂಚೆ : dekvafsu@gmail.com

